(ಸದನ ಪ್ರಾರಂಭವಾದಾಗ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಭಾವಿಯಲ್ಲಿ ಧರಣಿಯಲ್ಲಿದ್ದರು)

ಅಧ್ಯಕ್ಷರು : ಮೊದಲಿಗೆ, ಹುಟ್ಟುಹಬ್ಬದ ಶುಭಾಶಯಗಳು. ಈ ದಿನ ದಿನಾಂಕ: 24–06–2014ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾಗಿರುವ ಶ್ರೀ ವೈ.ಎಸ್.ವಿ.ದತ್ತ ಇವರಿಗೆ ಜನ್ಮ ದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

1. ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ: ಕಬ್ಬು ಬೆಳೆಗಾರರ ಸಮಸ್ಯೆ

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ): ಸನ್ಮಾನ್ಯ ಅಧ್ಯಕ್ಷರೆ, ನಿನ್ನೆಯೂ ನಾವು ಕಬ್ಬು ಬೆಳೆಗಾರರ ಸಮಸ್ಯೆಯ ಬಗ್ಗೆ ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದೆವು. ಇಡೀ ರಾಜ್ಯದ ರೈತರು ಬೆಂಗಳೂರಿಗೆ ಬಂದು ನಿನ್ನೆ ಹೋರಾಟವನ್ನೂ ಮಾಡಿದರು. ಕೆಲವೊಂದು ನಿರ್ದಿಷ್ಟವಾದಂಥ ಬೇಡಿಕೆಗಳ ಬಗ್ಗೆ ಸರ್ಕಾರದಿಂದ ಯಾವುದೇ ಒಂದು ಸ್ಪಷ್ಟನೆ ಬರಲಿಲ್ಲ. ಕೇಂದ್ರ ಸರ್ಕಾರ ನಿಗದಿ ಮಾಡಿದ ಎಫ್ಆರ್ಪಿಯನ್ನೂ ಸಹ ಸಕ್ಕರೆ ಕಾರ್ಖಾನೆಗಳ ಮಾಲೀಕರು ಕೊಡಲಿಲ್ಲ. ಅದನ್ನಾದರೂ ಕೊಡಬೇಕಾಗಿತ್ತು. ಇಷ್ಟು ಹೊತ್ತಿಗೆ ಪೇಮೆಂಟ್ ಮಾಡಬೇಕಾಗಿತ್ತು. ಎಫ್ಆರ್ಪಿ ಪ್ರಕಾರ ಕೊಟ್ಟಿಲ್ಲ, 2,100 ಎಂದು ಫಿಕ್ಸ್ ಮಾಡಿದ್ದಾರೆ, 9.5% ಇಳುವರಿ ಬೇಸಿಕ್ ಆಗಿದೆ. ಕೆಲವು ಕಡೆ ಇಳುವರಿ ಜಾಸ್ತಿ ಇರುತ್ತದೆ. ಬಿಜಾಪುರದಲ್ಲಿ ಡಿಫರೆಂಟ್ ಇದೆ, ಬೆಳಗಾವಿಯಲ್ಲಿ ಡಿಫರೆಂಟ್ ಇದೆ. ಆ ಪ್ರಕಾರ ಲೆಕ್ಕಾಚಾರ ಮಾಡಿ ಕಾರ್ಖಾನೆಗಳಿಂದ ವಸೂಲು ಮಾಡುವಂಥ ಕೆಲಸ ಆಗಬೇಕಾಗಿತ್ತು. ಅದೂ ಆಗಲಿಲ್ಲ.

ಅಧ್ಯಕ್ಷರು : ನಾನು ಹೇಳುತ್ತೇನೆ ಕೇಳಿ. ನೀವು ಎತ್ತಿದ ಪ್ರಶ್ನೆ ಸೀಮಿತವಾಗಿತ್ತು. ಸರ್ಕಾರ ಏನು ತೀರ್ಮಾನ ಮಾಡಿದೆ? ಆ ತೀರ್ಮಾನದ ಪ್ರಕಾರ ಸಂಬಂಧಪಟ್ಟವರು ನಡೆದುಕೊಳ್ಳಬೇಕು. ಇಷ್ಟಕ್ಕೆ ಸೀಮಿತವಾಗಿದೆ. Proportionate, ಮತ್ತೊಂದು ವಿಷಯ ಅದರಲ್ಲಿ ಇಲ್ಲ. ಬೆಳಗಾವಿಯಲ್ಲಿ ಏನು ಅನೌನ್ಸ್ ಮಾಡಿದ್ದಾರೆ, ಅದನ್ನು ಇಂಪ್ಲಿಮೆಂಟ್ ಮಾಡುವ ವಿಚಾರವನ್ನು ನೀವು ಪ್ರಸ್ತಾಪ ಮಾಡಿದ್ದೀರಿ. ನೀವು ಅಷ್ಟಕ್ಕೇ ಸೀಮಿತ ಮಾಡಿಕೊಳ್ಳಿ.

ಶ್ರೀ ಜಗದೀಶ ಶೆಟ್ಟರ್ : ಅವರು ಅದರಂತೆ ನಡೆದುಕೊಳ್ಳಬೇಕಲ್ಲವೇ? ಅವರ ಮಂತ್ರಿಗಳೇ ನಡೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು: ಮಂತ್ರಿಗಳು ಏನು ಹೇಳುತ್ತೀರೋ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಮಂತ್ರಿಗಳು ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ವೈ.ಎಸ್.ವಿ.ದತ್ತ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ,.....

(ಗೊಂದಲ)

ಅಧ್ಯಕ್ಷರು : ದತ್ತಾರವರೇ ನೋಡಿ, ಇದು ಚರ್ಚೆಯ ನಮೂನೆಯಲ್ಲ. ನೀವು ನಿನ್ನೆ ವಿಸ್ತೃತವಾಗಿ ಚರ್ಚೆ ಮಾಡಿದ್ದೀರಿ. ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಒಂದು ಕ್ಲಾರಿಫಿಕೇಷನ್ ಕೇಳುತ್ತೇವೆ ಎನ್ನುವುದಾದರೆ ಅಷ್ಟಕ್ಕೇ ಸೀಮಿತವಾಗಿ ಕೇಳಿ.

ಶ್ರೀ ವೈ.ಎಸ್.ವಿ.ದತ್ತ : ಕ್ಲಾರಿಫಿಕೇಷನ್ ಅನ್ನೇ ಕೇಳುತ್ತೇನೆ. ಎಫ್‌ಆರ್‌ಪಿಯದು ಒಂದು ಭಾಗ. ಕಾರ್ಖಾನೆ ಮಾಲೀಕರು ಕೊಡಬೇಕಾದುದು ಒಂದು ಭಾಗವಾದರೆ, ಬಹಳ ಮುಖ್ಯವಾಗಿ 150 ರೂಪಾಯಿಗಳನ್ನೇನು ಸರ್ಕಾರ ಕೊಡಬೇಕಾಗಿದೆ ಅದು ಇನ್ನೊಂದು ಭಾಗ

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರದಿಂದ ಕೊಡಬೇಕಾದುದನ್ನು ಒಂದು ವಾರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೇವೆ.

ಅಧ್ಯಕ್ಷರು: ಹೇಳಿದ್ದಾರಲ್ಲ, ಮತ್ತಿನ್ನೇನು ?

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರದವರು ಕಾರ್ಖಾನೆಗಳ ಮಾಲೀಕರಿಗೆ 100 ರೂಪಾಯಿಗಳ ಟ್ಯಾಕ್ಸ್ ಕನ್ಸೆಷನ್ ಕೊಟ್ಟಿದ್ದಾರೆ, ರೈತರಿಗೆ 150 ರೂಪಾಯಿ ಪ್ರೋತ್ಸಾಹ ಧನ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಒಂದು ವಾರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೇವೆ.

ಅಧ್ಯಕ್ಷರು : ಒಂದು ವಾರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರಲ್ಲ, ಮತ್ತೆ ಅದರಲ್ಲಿ ಚರ್ಚೆಯೇನು ?

ಶ್ರೀ ವೈ.ಎಸ್.ವಿ.ದತ್ತ : ನಿನ್ನೆ ಅವರು ಏನು ಹೇಳಿದರು ಎಂದರೆ, 150 ರೂಪಾಯಿಗಳಂತೆ ಕೊಡಬೇಕಾದುದನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ, ಹಣಕಾಸಿನ ಇಲಾಖೆಯವರು ಮಂಜೂರು ಮಾಡಿದ ಮೇಲೆ ಬಿಡುಗಡೆ ಮಾಡುತ್ತೇವೆ ಎಂದು

ಹೇಳಿದ್ದಾರೆ. ಸಿದ್ದರಾಮಯ್ಯನವರೇ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಅವರ ಆಫೀಸ್ ದೂರವೇನೂ ಇಲ್ಲ. ಹಾಗಿದ್ದರೂ ಅದು ಇನ್ನೂ ಏಕೆ ಹಣಕಾಸು ಇಲಾಖೆಯಲ್ಲಿಯೇ ಕೊಳೆಯುತ್ತಿದೆ?

ಅಧ್ಯಕ್ಷರು : ಇದನ್ನು ನೀವು ನಿನ್ನೆಯೇ ಏಕೆ ಕ್ಲಾರಿಫಿಕೇಷನ್ ಕೇಳಲಿಲ್ಲ ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : 150 ರೂಪಾಯಿಗಳಂತೆ ಕೊಡಬೇಕಾದುದರಲ್ಲಿ ಬಹುತೇಕ ಪೇಮೆಂಟ್ ಆಗಿದೆ. ಉಳಿದುದನ್ನು ಒಂದು ವಾರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೇವೆ.

(ಈ ಹಂತದಲ್ಲಿ ಜೆ.ಡಿ.(ಎಸ್)ನ ಸದಸ್ಯರೂ ಧರಣಿಗಾಗಿ ಸದನದ ಬಾವಿಗೆ ಬಂದರು)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಹಣಕಾಸು ಇಲಾಖೆಗೆ ಹೋಗಿದೆ ಎಂದರೆ ಅದು ನಿಮಗೇ ಬಂದಿದೆಯಲ್ಲವೇ ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ದತ್ತಾರವರೇ, ಒಂದು ವಾರದಲ್ಲೇ ಕೊಡುತ್ತೇವೆ ಎಂದು ಹೇಳಿದ್ದಾರಲ್ಲ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಜಗದೀಶ ಶೆಟ್ಟರ್‌ರವರೂ ಸದನದ ಬಾವಿಗೆ ಬಂದರು)

ಶ್ರೀ ಸಿದ್ದರಾಮಯ್ಯ : ವಿರೋಧ ಪಕ್ಷದ ನಾಯಕರು ಆರಾಮವಾಗಿ ಕುಳಿತುಕೊಳ್ಳಲಿ ಎಂದು ನಾವು ಹೇಳಿದರೆ, ಇಲ್ಲ, ನಾವು ಬಾವಿಗೆ ಬರುತ್ತೇವೆ ಎಂದರೆ ನಾವೇನು ಮಾಡುವುದು ?

(ರೈತರು ಬೀದಿಗೆ ಬಿದ್ದಿದ್ದಾರೆ ಎಂದು ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ ಶೆಟ್ಟರ್‌ರವರು ಸದನದ ಬಾವಿಯಿಂದ ಪ್ರತಿಕ್ರಯಿಸಿದರು)

ಅಧ್ಯಕ್ಷರು : ಈಗ ಅದೆಲ್ಲಾ ಬೇಡ, ವಿಷಯಕ್ಕೆ ಬನ್ನಿ.

ಶ್ರೀ ಸಿದ್ದರಾಮಯ್ಯ : ಅದೆಲ್ಲಾ ಬೇಡ. ರೈತರ ಬಗ್ಗೆ ನೀವು ಏನೆಲ್ಲಾ ಮಾಡಿದ್ದೀರಿ ಎನ್ನುವುದು ಇಡೀ ಜಗತ್ತಿಗೆ ಗೊತ್ತಿದೆ. ಕಬ್ಬಿನ ಬೆಲೆಯನ್ನು ರೈತರಿಗೆ ಕೊಡಿಸಬೇಕಾಗಿರುವಂಥದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಕಳೆದ ವರ್ಷದಿಂದ ಮಾತ್ರ ಕಾಯಿದೆ ಜಾರಿಗೆ ಬಂದಿದೆ. ಅದಕ್ಕಿಂತ ಮೊದಲು ಕಾಯಿದೆ ಇರಲಿಲ್ಲ. 2013ರಲ್ಲಿ ಬೆಳಗಾವಿ ಅಧಿವೇಶನದಲ್ಲಿ ನಾವು ಕಬ್ಬು ನಿಯಂತ್ರಣ ಕಾಯಿದೆಯನ್ನು ಮಾಡಿದ್ದೇವೆ. ಕಬ್ಬು ನಿಯಂತ್ರಣ ಮಂಡಳಿಯನ್ನು ಮಾಡಬೇಕು ಎಂದು ಆ ಕಾಯಿದೆಯಲ್ಲಿ ಹೇಳಿದ್ದಾರೆ. ಆ ಮಂಡಳಿಯು ಮಂತ್ರಿಯ ಅಧ್ಯಕ್ಷತೆಯಲ್ಲಿರುತ್ತದೆ. ಅದರಲ್ಲಿ ರೈತರ ಪ್ರತಿನಿಧಿಗಳು ಇರುತ್ತಾರೆ, ಕಾರ್ಖಾನೆಗಳ ಪ್ರತಿನಿಧಿಗಳು ಕೂಡ ಇರುತ್ತಾರೆ. 2013–14ರಲ್ಲಿ ಯಾವ ಬೆಲೆ ಕೊಡಬೇಕು ಎನ್ನುವುದನ್ನು ಆ ಮಂಡಳಿಯವರು ನಿಗದಿ ಮಾಡಿದ್ದಾರೆ. ಅದನ್ನು ನಾವು ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಬಂದು ತೀರ್ಮಾನ ಮಾಡಿದುದಲ್ಲ. ಅದು ಸರ್ಕಾರ ತೆಗೆದುಕೊಂಡಂಥ ನಿರ್ಣಯವಲ್ಲ. ಮಂಡಳಿಯವರು ಮಾಡಿದ ಶಿಫಾರಸ್ಸು/ತೀರ್ಮಾನವನ್ನೇ ನಾವು ಅನೌನ್ಸ್ ಮಾಡಿದ್ದೇವೆ. Ex-gate ನಲ್ಲಿ 12 ಕಾರ್ಖಾನೆಗಳವರು 2,500 ರೂಪಾಯಿ ಕೊಡಬೇಕು, ಉಳಿದ ಕಾರ್ಖಾನೆಗಳವರು Ex-field 2,500 ರೂಪಾಯಿಗಳನ್ನು ಕೊಡಬೇಕು ಎಂದು ಆ ಬೋರ್ಡ್‌ನಲ್ಲಿ ತೀರ್ಮಾನವಾಯಿತು. ಇದು ಬೆಳಗಾವಿ ಅಧಿವೇಶನದಲ್ಲಿ ಚರ್ಚೆಯಾಗಿ ತೀರ್ಮಾನವಾಯಿತು. ಆಗ ಅಲ್ಲಿ ರೈತರು ಪ್ರತಿಭಟನೆ ಮಾಡುತ್ತಿದ್ದರು. ಆಗ ನಾನು ರೈತರನ್ನು ಕರೆದು ಮಾತನಾಡಿದ ಮೇಲೆ, ನೀವು ಬೆಲೆ ಕಡಿಮೆಯಾಗಿದೆ, ವ್ಯವಸಾಯದ ಖರ್ಚು ಜಾಸ್ತಿಯಾಗಿದೆ. ಗೊಬ್ಬರದ ರೇಟ್ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದೀರಿ, ಆದ್ದರಿಂದ 150 ರೂಪಾಯಿಗಳನ್ನು ನಾವು ಸರ್ಕಾರದಿಂದ ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿ ಒಂದು ಟನ್ ಕಬ್ಬಿಗೆ 150 ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ ಎಂದು ಅನೌನ್ಸ್ ಮಾಡಿದೆವು. ಶುಗರ್ ಫ್ಯಾಕ್ಟರಿಯವರು ಏನು ಹೇಳಿದರೆಂದರೆ 2012–13ರಲ್ಲಿ ಸಕ್ಕರೆ ರೇಟು ಕ್ವಿಂಟಾಲ್‌ಗೆ 3,300–3,400 ರೂಪಾಯಿಗಳಿತ್ತು, ಈಗ ಸಕ್ಕರೆ ರೇಟು ಕ್ವಿಂಟಾಲ್‌ಗೆ 2,600 ರೂಪಾಯಿಗಳಾಗಿ ಬಿಟ್ಟಿದೆ, ಹಾಗಾಗಿ 2,500 ರೂಪಾಯಿಗಳನ್ನು ಕೊಡಲು ನಮಗೆ ಹೊರೆಯಾಗುತ್ತದೆ, ಅದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ವಾದ ಮಾಡಲು ಪ್ರಾರಂಭ ಮಾಡಿದರು. ಅದಕ್ಕೆ ಸಕ್ಕರೆ

ಕಾರ್ಖಾನೆಗಳವರಿಗೆ ನಾವು ಏನು ಹೇಳಿದೆವೆಂದರೆ, ಪ್ರತಿ ಟನ್ನಿಗೆ 2,500 ರೂಪಾಯಿಗಳನ್ನು ನಾವು ನಿಗದಿ ಮಾಡಿದ್ದೇವೆ. ನೀವು ಸರ್ಕಾರಕ್ಕೆ ಕೊಡಬೇಕಾದಂಥ ಪರ್ಚೇಸ್ ಟ್ಯಾಕ್ಸ್ ಮತ್ತು ಇತರ ತೆರಿಗೆಗಳು ಒಂದು ಟನ್ನಿಗೆ ಒಂದು ನೂರು ರೂಪಾಯಿಗಳಾಗುತ್ತದೆ, ಅದನ್ನು ನಾವು ಮನ್ನಾ ಮಾಡುತ್ತೇವೆ ಎಂದು ಹೇಳಿದೆವು. ಅದೇ ರೀತಿ, 2013–14ಕ್ಕೆ ಅದನ್ನು ಮನ್ನಾ ಮಾಡಿ ಆದೇಶವನ್ನು ಕೂಡ ಹೊರಡಿಸಿದೆವು. ಇದರಿಂದ ಉಳಿತಾಯವಾಗುವ ಒಂದು ನೂರು ರೂಪಾಯಿಗಳನ್ನು ನೀವು ರೈತರಿಗೆ ವರ್ಗಾವಣೆ ಮಾಡಿ, ಆಗ ನಿಮಗೆ 2,400 ರೂಪಾಯಿ ಮಾತ್ರ ಬೀಳುತ್ತದೆ, 2,500 ರೂಪಾಯಿ ಅಲ್ಲ ಎಂದು ಅವರ ಜೊತೆ ಕೂಡ ಮಾತುಕತೆ ಮಾಡಿದೆವು. ಪ್ರತಿ ಟನ್ ಕಬ್ಬಿಗೆ 150 ರೂಪಾಯಿ ಸಬ್ಸಿಡಿ ಕೊಡುತ್ತೇವೆ ಎಂದೇನು ಹೇಳಿದ್ದೆವು, ಅದರ ಪ್ರಕಾರ ಸರ್ಕಾರ ಒಟ್ಟು 574 ಕೋಟಿ ರೂಪಾಯಿಗಳನ್ನು ಕೊಡಬೇಕು. ಅದರಲ್ಲಿ ಈಗಾಗಲೇ 398 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ 176 ಕೋಟಿ ರೂಪಾಯಿಗಳನ್ನು ಕೊಡಬೇಕು. ಅದು ಆರ್ಥಿಕ ಇಲಾಖೆಯಲ್ಲಿದೆ, ಅದನ್ನು ಇನ್ನೊಂದು ವಾರದಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ಈಗ ಸದನಕ್ಕೆ ಉತ್ತರ ಕೊಡುತ್ತಿದ್ದೇನೆ, ಇನ್ನೊಂದು ವಾರದೊಳಗೇ 176 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ರೈತರಿಗೆ 150 ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆ ಎಂದೇನು ಒಪ್ಪಿಕೊಂಡಿದ್ದೆವು, ಅದನ್ನು ರೈತರಿಗೆ ತಲುಪಿಸುವಂಥ ಕೆಲಸವನ್ನು ಮಾಡುತ್ತೇವೆ. ಇದು ಸರ್ಕಾರದ ಕಮಿಟ್‌ಮೆಂಟ್, ನಾವು ಇದನ್ನು ಚಾಚೂ ತಪ್ಪದೇ ಮಾಡುತ್ತೇವೆ. ದತ್ತಾರವರೇ, ಗೊತ್ತಾಯಿತಲ್ಲ? ಅದು ಆರ್ಥಿಕ ಇಲಾಖೆಯಲ್ಲಿರಲಿ, ಎಲ್ಲಾದರೂ ಇರಲಿ, 176 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದ ನಾನು ಈಗ ಸದನದಲ್ಲಿ ಹೇಳುತ್ತಿದ್ದೇನೆ. ಇನ್ನೂ, Sugar factory ಗೆ ಸಹಾಯ ಮಾಡುವುದಕ್ಕೆ ಹೊರಟುಬಿಟ್ಟಿದೀರಿ ಎಂದು ಶ್ರೀ ದತ್ತಾರವರು ಹೇಳಿದ್ದಾರೆ ಮತ್ತು ಶ್ರೀ ಜಗದೀಶ್ ಶೆಟ್ಟರ್‌ರವರು ಸಹ ಹೇಳಿದ್ದಾರೆ. ನಾವು Sugar factory ಯವರಿಗೆ ಸಹಾಯ ಮಾಡುವುದಾಗಲಿ, ಯಾರದೋ ಮುಲಾಜಿಗೆ ಒಳಗಾಗುವುದಾಗಲಿ, ಯಾವ ಪ್ರಶ್ನೆ ಕೂಡ ಇಲ್ಲ. ಯಾರ ಮುಲಾಜಿಗೆ ಒಳಗಾಗುವುದಿಲ್ಲ. ಸಕ್ಕರೆ ಕಾರ್ಖಾನೆಗಳ SISMA ಎನ್ನುವ ಸಂಘ ಇದೆ. ಇವರು court ಗೆ ಹೋದರು. ಇವರ ಮೇಲೆ coercive measures ಯಾವುದೂ

ತೆಗೆದುಕೊಳ್ಳಕೂಡದು ಎಂದು Court ನವರು ಒಂದು ಆದೇಶ ಕೊಟ್ಟರು. ಜೊತೆಗೆ High Court ನವರು, ಯಾರು FRP ಕೊಟ್ಟಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. FRP ಎಂದರೆ Fair and Remunerative Price, Sugar Control order ಪ್ರಕಾರವಾಗಿ Government of India ದವರು2012–13ಕ್ಕೆ 1700 ರೂಪಾಯಿಗಳನ್ನು ನಿಗದಿ ಮಾಡಿದ್ದರು, 2013–14ಕ್ಕೆ 2000 ರೂಪಾಯಿಗಳ ಬೆಂಬಲ ಬೆಲೆ ನಿಗದಿ ಮಾಡಿದ್ದರು. 9.5 recovery ಗೆ, ಅದರ ಮೇಲೆ ಹೆಚ್ಚಾದುದಕ್ಕೆಲ್ಲ ಹಣ ಕೊಡಬೇಕೆಂದು ಮಾಡಿದ್ದಾರೆ. Ex-gate ಎಂದು ಅವರು specific ಆಗಿ ಹೇಳಿಲ್ಲ. Government of India ದ Sugar Control Order ನಲ್ಲಿ ex-gate ಎಂದು ಇದೆ. ಉತ್ತರ ಕರ್ನಾಟಕದಲ್ಲಿ ಮೊದಲಿನಿಂದ ex-field ಎಂದು ನಡೆದುಕೊಂಡು ಬಂದಿದೆ. ಆ ಆಧಾರದ ಮೇಲೆ Board ನವರು ತೀರ್ಮಾನ ಮಾಡಿರುವಂಥದ್ದು, ಆ ಕಡೆಗೆ ex-field, ಈ ಕಡೆಗೆ ex-gate ಎಂದು ತೀರ್ಮಾನ ಮಾಡಿರುವಂಥದ್ದು. ಉತ್ತರ ಕರ್ನಾಟಕದಲ್ಲಿ recovery ಏಕೆ ಏರಿದೆ ಎಂದರೆ ನಮಗೆ ಇಲ್ಲಿ 9.5% maximum ಎಂದರೆ 10%. ಆದರೆ, ಅಲ್ಲಿ 11.5% ನಿಂದ 12% ವರೆಗೂ ಇದೆ, 12.5% ವರೆಗೂ ಇದೆ. ಕಳೆದ ವರ್ಷ ಸರಾಸರಿ 11% ಆಗಿದೆ. 11.52% ಆದಮೇಲೆ Sugar factory ಯವರು ಕೊಡಬೇಕಲ್ಲವೇ ? ಕೊಟ್ಟಿಲ್ಲ. ಅವರು ಕೊಡದೆಯೇ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ, Courtಗೆ ಹೋಗಿದ್ದಾರೆ. Court ನವರು ಏನು ಮಾಡಿದ್ದಾರೆಂದರೆ, 2500 ರೂ.ಗಳನ್ನು ಟನ್ ಒಂದಕ್ಕೆ ಕೊಡಬೇಕೆಂದು ಏನು ಹೇಳಿದ್ದೆವು ಅದಕ್ಕೆ ಜುಲೈ end ವರೆಗೆ stay ಕೊಟ್ಟಿದ್ದಾರೆ. ಆದರೆ, ಅದರಲ್ಲಿ ಹೇಳುತ್ತಾ, ಹೇಳುತ್ತಾ 2100 ರೂಪಾಯಿಗಳಂತೆ ಯಾರು ಕೊಟ್ಟಿಲ್ಲ ಅವರ ಮೇಲೆ action ತೆಗೆದುಕೊಳ್ಳಿ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು Court ನವರು ಹೇಳಿದ್ದಾರೆ. ನಾವು ಎಲ್ಲರಿಗೂ notice ಕೊಟ್ಟಿದ್ದೇವೆ. Notice ಕೊಟ್ಟಿರುವುದರಲ್ಲಿ 18 Sugar factory ಗಳು ಬಿಟ್ಟು ಬಾಕಿ ಎಲ್ಲ factory ಗಳವರು ಉತ್ತರ ಕೊಟ್ಟಿದ್ದಾರೆ. ಅದಾದಮೇಲೆ, ನಾವು ಪುನಃ ಅವರಿಗೆ recovery certificate ಸಹ issue ಮಾಡತಕ್ಕಂಥದ್ದನ್ನು 21ನೇ ತಾರೀಖು ಮಾಡಿದ್ದೇವೆ. ನಾವು ಯಾರದೇ ಮುಲಾಜಿಗೂ ಒಳಗಾಗುವ ಪ್ರಶ್ನೆ ಇಲ್ಲ. ಕಾನೂನಿನಲ್ಲಿ ಏನೇನು ಅವಕಾಶಗಳಿವೆ,

ಅದು Sugar Control Order ಇರಬಹುದು, ನಾವು ಮಾಡಿರತಕ್ಕಂಥ SAP Act ಇರಬಹುದು, ಈ Act ನಲ್ಲಿ ಬಡ್ಡಿ ಸಹಿತವಾಗಿ ವಸೂಲಿ ಮಾಡಬೇಕೆನ್ನುವುದು ಇದೆ. ಹಾಗಾಗಿ, ಯಾರೇ Sugar factory ಯವರು ಇರಲಿ, ನಮ್ಮ party ಯವರು Sugar factory ನಡೆಸುವವರು ಇರಬಹುದು, ಬಿಜೆಪಿ ಪಕ್ಷದವರು Sugar factory ನಡೆಸುವವರು ಇರಬಹುದು, ಜೆಡಿ(ಎಸ್)ನವರು Sugar factory ನಡೆಸುವವರು ಇರಬಹುದು, ಯಾರ ಮುಲಾಜಿಗೂ ಕೂಡ ನಾವು ಒಳಗಾಗುವುದಿಲ್ಲ. Sugar factory ಯವರ ಮುಲಾಜಿಗೆ ಯಾವ ಕಾರಣಕ್ಕೂ ನಾವು ಒಳಗಾಗುವುದಿಲ್ಲ. ನಾವು ಕಾನೂನು ರೀತಿಯ ಕ್ರಮ ತೆಗೆದುಕೊಂಡು, ಈಗ Courtನವರ ಆದೇಶವೇನಿದೆ, 2100 FRP ಕೊಡಬೇಕೆಂದೇನಿದೆ, ಅದನ್ನು ಬಡ್ಡಿ ಸಮೇತವಾಗಿ ವಸೂಲಿ ಮಾಡಿಕೊಡತಕ್ಕಂಥ ಕೆಲಸವನ್ನು ಕೂಡ ಮಾಡಿದ್ದೇವೆ. ಒಂದು ವೇಳೆ Sugar factory ಯವರು ನಾವೇನು ತೆರಿಗೆ ವಸೂಲಿ ಮನ್ನಾ ಮಾಡಿದ್ದೇವೆ, ತೆರಿಗೆ ಹಣವನ್ನು ರೈತರಿಗೆ ಏನಾದರೂ pass on ಮಾಡದೇ ಇದ್ದರೆ ಅದನ್ನು ಕೂಡ ಸಂಬಂಧಪಟ್ಟ ಸಕ್ಕರೆ ಕಾರ್ಖಾನೆಯವರಿಂದ ವಸೂಲಿ ಮಾಡುತ್ತೇವೆ. ಅದನ್ನು ವಸೂಲಿ ಮಾಡಿ ರೈತರಿಗೆ ಅದೆಷ್ಟು ಬರುತ್ತದೋ ಅಷ್ಟನ್ನೂ ಅವರಿಗೆ pass on ಮಾಡುವ ಕೆಲಸ ಮಾಡುತ್ತೇವೆ. ಇಷ್ಟು ಕ್ರಮಗಳನ್ನು ಪ್ರಾಮಾಣಿಕವಾಗಿ ನಮ್ಮ ಸರ್ಕಾರ ತೆಗೆದುಕೊಳ್ಳುತ್ತದೆ, ಇದರಲ್ಲಿ ಯಾರೂ ಸಂಶಯ ಇಟ್ಟುಕೊಳ್ಳಬೇಕಾದಂಥ ಅಗತ್ಯವಿಲ್ಲ. ನಮ್ಮ ಸರ್ಕಾರ ರೈತರ ಪರವಾಗಿ ಇದೆ. ನಾವು ರೈತರಿಗೆ ಯಾವ ಕಾರಣಕ್ಕೂ ಕೂಡ ವಿರುದ್ಧ ಮಾಡುವ ಪ್ರಶ್ನೆ ಉದ್ಭವವೇ ಆಗುವುದಿಲ್ಲ. ಆದ್ದರಿಂದ, ದಯಮಾಡಿ ಮಾನ್ಯ ಸದಸ್ಯರುಗಳು ನಮಗೆ ಸ್ವಲ್ಪ ಅವಕಾಶ ಕೊಡಬೇಕು, ಅದನ್ನು ಕಾನೂನು ರೀತಿಯಲ್ಲಿ ಮಾಡುತ್ತೇವೆನ್ನುವ ಮಾತನ್ನು ಅವರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)(ತಮ್ಮ ಸ್ಥಾನದಿಂದ): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಹಲವಾರು ವಿಚಾರಗಳನ್ನು ಹೇಳಿದರು. ಸರ್ಕಾರ ಕೊಡಬೇಕಾದಂಥ 176 ಕೋಟಿ ರೂಪಾಯಿಗಳನ್ನು ಒಂದು ವಾರದೊಳಗೆ payment ಮಾಡುತ್ತೇವೆಂದು ಅವರು ಹೇಳಿದ್ದಾರೆ. ಇಲ್ಲಿಯೇ ಅಧಿವೇಶನ ನಡೆಯುತ್ತಿರುತ್ತದೆ. ನಾವು ನೋಡುತ್ತೇವೆ, observe ಮಾಡುತ್ತೇವೆ. ಈಗ ಸದನದಲ್ಲಿ 176 ಕೋಟಿ ರೂಪಾಯಿಗಳನ್ನು ಒಂದು ವಾರದಲ್ಲಿ payment

ಮಾಡುತ್ತೇವೆಂದು promise ಮಾಡಿದ್ದಾರೆ. ನಿನ್ನೆ ಮಾನ್ಯ ಮಹದೇವ ಪ್ರಸಾದ್‌ರವರು ಮಾತನಾಡುತ್ತಾ, ಈಗಾಗಲೇ ನಾವು ಹಣಕಾಸು ಇಲಾಖೆಗೆ ಕೇಳಿ ಆಗಿದೆ ಎಂದು ಹೇಳಿದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು insist ಮಾಡಿದ ಮೇಲೆ orders ಕೊಡಿ ಎಂದಿದ್ದಕ್ಕೆ ಒಂದು ವಾರದೊಳಗೆ ಬಿಡುಗಡೆಯಾಗುತ್ತದೆ ಎಂದು ಹೇಳಿದ್ದೇವೆ.

ಶ್ರೀ ಜಗದೀಶ್‌ಶೆಟ್ಟರ್: ಆಯಿತು, ಒಂದು ವಾರದೊಳಗೆ ಬಿಡುಗಡೆಯಾಗುತ್ತದೆಯೇ?

ಶ್ರೀ ಸಿದ್ದರಾಮಯ್ಯ: ನಾನು ಹೇಳುತ್ತಿದ್ದೇನೆ, as Finance Minister, 176 ಕೋಟಿ ರೂಪಾಯಿಗಳನ್ನು ಇನ್ನು ಒಂದು ವಾರದೊಳಗೆ ಬಿಡುಗಡೆ ಮಾಡುತ್ತೇವೆ. ಅಂದರೆ ಉಳಿದಿರುವ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಈ FRP ಪ್ರಕಾರ High Court ನಲ್ಲಿ stay ಇದ್ದದ್ದು, ಟನ್ ಒಂದಕ್ಕೆ 2500 ರೂಪಾಯಿಗಳನ್ನು ಕೊಡುವಂತದಕ್ಕೆ ಜುಲೈ end ವರೆಗೆ stay ಇದೆ. ಅದನ್ನು speed up ಮಾಡುತ್ತೇವೆಂದು ಹೇಳಿದ್ದಾರೆ. ದಯವಿಟ್ಟು ಅದು speed up ಆಗಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, FD has issued the orders on 21st June, 2014. FD ಯಿಂದ issue ಆಗಿದೆ. ಇದು Agriculture Department ಗೆ ಹೋಗಬೇಕು. Agriculture Department is issuing the order today. ಮುಗಿಯಿತಲ್ಲ ? ಇನ್ನು ಒಂದು ವಾರವೂ ಬೇಕಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನೀವು promise ಮಾಡಿದ್ದೀರಿ, ನಾವು ನಂಬಿದ್ದೇವೆ. (ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಸಿದ್ದರಾಮಯ್ಯ: It will reach the D.C. within one or two days.

ಅಧ್ಯಕ್ಷರು: ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತುಕೊಂಡು ಚರ್ಚೆ ಮಾಡಬೇಡಿ. ಮಾತನಾಡಬೇಕಾದರೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಹೇಳಿ ಜಗದೀಶ್ ಶೆಟ್ಟರ್‌ರವರೆ.

ಶ್ರೀ ಜಗದೀಶ್ ಶೆಟ್ಟರ್: 2500 ರೂ.ಗಳನ್ನು ಕೊಡುವ ಬಗ್ಗೆ stay ತೆಗೆದುಕೊಂಡಿರುವುದಕ್ಕೆ ನಾಳೆ ಅದು hearing ಗೆ ಬರುತ್ತಿದೆ. ನೀವು speed up ಮಾಡಬೇಕು. ಎಲ್ಲಾ ರೀತಿಯ ಪ್ರಯತ್ನ ಮಾಡಿ ಆ stay vacate ಮಾಡುವ ಕೆಲಸ ಆಗಬೇಕು. ಏಕೆಂದರೆ ನೀವು ನಿಗದಿ ಮಾಡಿರುವಂಥ rate ಅದು.

ಶ್ರೀ ಸಿದ್ದರಾಮಯ್ಯ: ನಾವು ಅದರ ಮೇಲೆ appeal ಸಹ ಹಾಕಿದ್ದೇವೆ. ಎಲ್ಲೂ ಕೂಡ ನಾವು delay ಮಾಡುವುದಾಗಲಿ, negligence ತೋರಿಸುವುದಾಗಲಿ, ಯಾವುದೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿ appear ಆಗಿ stay Vacate ಮಾಡಿಸುವುದು ಆಗಬೇಕು.

ಶ್ರೀ ಸಿದ್ದರಾಮಯ್ಯ: ಆ ಪ್ರಯತ್ನ ಮಾಡುತ್ತೇವೆ, ಈಗಾಗಲೇ Advocate General ಗೆ ಹೇಳಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಕೇಂದ್ರ ಸರ್ಕಾರ ಏನು FRP ಪ್ರಕಾರ ನಿಗದಿ ಮಾಡಿದೆ, 2100 ರೂ.ಗಳನ್ನು last year fix ಮಾಡಿದೆ, 9.5% recovery ಇದು base ಇದೆ. ಆಮೇಲೆ ಬೇರೆ ಬೇರೆ ಕಡೆ different ಇದೆ. ಬಿಜಾಪುರದಲ್ಲಿ ಬೇರೆ ಇದೆ, ಬೆಳಗಾಂನಲ್ಲಿ recovery ಬೇರೆ ಇದೆ, 11.5, 12.5 ಈ ರೀತಿ ಇದೆ. ಆದರೆ, ಬಿಜಾಪುರದಲ್ಲಿ ಕೆಲವು factory ಯವರು ರೈತರಿಗೆ ಟನ್ ಒಂದಕ್ಕೆ 1600 ರೂ. ಕೊಟ್ಟಿದ್ದಾರೆ, 1800 ರೂ. ಕೊಟ್ಟಿದ್ದಾರೆ. ಅವರಿಗೆಲ್ಲ ನೀವು ಸರ್ಕಾರದ ಕಡೆಯಿಂದ notice issue ಮಾಡಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾನು complete ಮಾಡಿಬಿಡುತ್ತೇನೆ. ಬಿಜಾಪುರದಲ್ಲಿ 5 sugar factory ಗಳಿವೆ. ಈ 5 factory ಯವರೂ ಸಹ ರೈತರಿಗೆ ಒಂದೊಂದು ರೀತಿಯ payment ಮಾಡಿದ್ದಾರೆ. ಒಬ್ಬೊಬ್ಬರು 1600 ರೂ. ಕೊಟ್ಟಿದ್ದಾರೆ, ಇನ್ನೂ ಕೆಲವರು 1800 ರೂ. ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಹದೇವ ಪ್ರಸಾದ್‌ರವರೇ, ನಾನು complete ಮಾಡಿಬಿಡುತ್ತೇನೆ. ಆಮೇಲೆ ನೀವು ಹೇಳಿ. ಇದಕ್ಕೆ ಸ್ಪಷ್ಟೀಕರಣ ಕೊಡಿ. ನಾವು ಎಲ್ಲರೂ ಕೂಡಿ ರೈತರ ಹಿತಾಸಕ್ತಿಯನ್ನು ಕಾಪಾಡಬೇಕಾದರೆ ಈ sugar factory ಗಳ ಮಾಲೀಕರು ಏನು ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ, ಅದಕ್ಕೆ ಅವರಿಗೆ ಸರಿಯಾದ ಪಾಠವನ್ನು ಕಲಿಸಬೇಕಾಗಿದೆ. ಸರ್ಕಾರ ಇದರ ಬಗ್ಗೆ ಗಟ್ಟಿಯಾಗಿ ನಿಲ್ಲಬೇಕಾಗಿದೆ. ಕೇಂದ್ರ ಸರ್ಕಾರ ಸಹ ಈಗಾಗಲೇ ಆಮದು ಸುಂಕವನ್ನು ಜಾಸ್ತಿ ಮಾಡಿದ್ದಾರೆ. ಅದೂ ಸಹಿತ ನಾಳೆಗೆ help ಆಗುವಂಥದ್ದಾಗಿದೆ. ಒಂದು ಸಾವಿರ ಕೋಟಿಯಷ್ಟು sugar factoryಗೆ ಕೊಡುವಂತದ್ದು ಇದ್ದಾಗ sugar factory ಯವರು ತಕ್ಷಣಕ್ಕೆ ಬಂದು ಸ್ಪಂದನೆ ಮಾಡಬೇಕು. ಆ ರೀತಿ ಸ್ಪಂದನೆ ಮಾಡದಿದ್ದಾಗ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಅವರ ಮೇಲೆ ಎಲ್ಲಾ ರೀತಿಯ action ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರ FRP ಪ್ರಕಾರ ಏನು ನಿಗದಿ ಮಾಡಿದೆ ಅದನ್ನೂ ಕೊಡಲಾರದ factory ಗಳಿವೆ. ಅದಕ್ಕೆ ಯಾವುದೇ ರೀತಿಯ stay ಇಲ್ಲ. ಹಾಗಾಗಿ, ಅದರ ಬಗ್ಗೆ immediately ನೀವು Sugar seize ಮಾಡುವಂಥದ್ದು, ಮತ್ತೊಂದು ಹಾಗೂ differentiate ಏನಿದೆ, ಇನ್ನೊಂದು ನೀವು calculation ಮಾಡಬೇಕು. recovery 9.5 base ಇದೆ.

ಅಧ್ಯಕ್ಷರು: ಹೇಳಿದರಲ್ಲ ?

ಶ್ರೀ ಜಗದೀಶ್ ಶೆಟ್ಟರ್: ಜಾಸ್ತಿ ಇರುವುದಕ್ಕೆ ಆ difference rate fix ಮಾಡಿ.

ಅಧ್ಯಕ್ಷರು: ಹೇಳಿದರಲ್ಲ ?

ಶ್ರೀ ಜಗದೀಶ್ ಶೆಟ್ಟರ್: ಅವರಿಂದ recovery ಮಾಡಬೇಕು. ಆಗ ಮಾತ್ರ ಆಗುತ್ತದೆ. ಈ ರೀತಿ ನೀವು ಸ್ಪಷ್ಟವಾದ ಭರವಸೆ ಕೊಡಿ. ಅದರ ಬಗ್ಗೆ ನಾವು ಮಾಡುತ್ತೇವೆ.

ಅಧ್ಯಕ್ಷರು: ಹೇಳಿದರಲ್ಲ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು): ಜಗದೀಶ್ ಶೆಟ್ಟರ್‌ರವರೆ, ನಾನು ಇನ್ನೊಂದು ಸಾರಿ ಭರವಸೆ ಕೊಟ್ಟುಬಿಡುತ್ತೇನೆ. ಎಲ್ಲಾ sugar factoryಗಳಿಗೂ notice ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಕೆಲವರು ಉತ್ತರವನ್ನೂ ಕೊಟ್ಟಿಲ್ಲ.

ಅಧ್ಯಕ್ಷರು: ಕೆಲವರು ಕೊಟ್ಟಿದ್ದಾರೆ, ಕೆಲವರು ಕೊಟ್ಟಿಲ್ಲವೆಂದು ಹೇಳಿದರಲ್ಲ?

ಶ್ರೀ ಸಿದ್ದರಾಮಯ್ಯ: ಯಾರು ಉತ್ತರ ಕೊಟ್ಟಿಲ್ಲ ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆ. sugar ಅನ್ನು attach ಮಾಡುವುದು, seize ಮಾಡುವುದು, ಮಾಡಲಿಕ್ಕೆ ಕಾನೂನಿನಲ್ಲಿ ಏನೇನು ಅವಕಾಶಗಳಿವೆ, criminal action ತೆಗೆದುಕೊಳ್ಳಲಿಕ್ಕೆ ಅವಕಾಶವಿದ್ದರೆ criminal action ತೆಗೆದುಕೊಳ್ಳಲಿಕ್ಕೆ ನೋಡುತ್ತೇವೆ.

ಅಧ್ಯಕ್ಷರು: ಹೇಳಿದರಲ್ಲ ?

ಶ್ರೀ ಸಿದ್ದರಾಮಯ್ಯ: ಇವೆಲ್ಲ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂದು ದಯವಿಟ್ಟು ಹೇಳಿ.

ಶ್ರೀ ಸಿದ್ದರಾಮಯ್ಯ: ಎಷ್ಟು ದಿವಸ ಎಂದು ಹೇಳುವುದು ?

ಶ್ರೀ ಜಗದೀಶ್ ಶೆಟ್ಟರ್: Time-bound ಹೇಳಿ. ಒಂದು ವಾರವೋ, 10 ದಿವಸಗಳೋ ? 15 ದಿವಸ time ತೆಗೆದುಕೊಳ್ಳಿ ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ವಾರ ಎಂದು ಅಲ್ಲ, ಇವತ್ತಿನಿಂದಲೇ.

ಶ್ರೀ ಜಗದೀಶ್ ಶೆಟ್ಟರ್: ಬೆಳಗಾವಿ ಅಧಿವೇಶನದಿಂದಲೂ ಇದು ಇದೆ. ಒಂದು ನಿಗದಿ ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಲ್ಲದಿದ್ದರೆ ಅವರಿಗೆ ಹೆದರಿಕೆ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತಿನಿಂದಲೇ.

ಅಧ್ಯಕ್ಷರು: ಆಯಿತು.

ಶ್ರೀ ಸಿದ್ದರಾಮಯ್ಯ: ಒಂದು ವಾರ, 15 ದಿವಸ ಎಂದು ಇದಕ್ಕೆ time ಅಲ್ಲ. ಇವತ್ತಿನಿಂದಲೇ ಪ್ರಾರಂಭ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: Serious ಆಗಿ ತೆಗೆದುಕೊಳ್ಳಿ. ಇಲ್ಲದಿದ್ದರೆ factorey ಯವರು ಬಗ್ಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: We are very very Serious.

ಅಧ್ಯಕ್ಷರು: ಸರ್ಕಾರ ಮಾಡುವ ಕೆಲಸ ಮಾಡುತ್ತದೆ. ಬಗ್ಗುವುದಿಲ್ಲ ಎಂದರೆ ನೀವು ಹೋಗಿ ಬಗ್ಗಿಸುತ್ತೀರಾ ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: 7 ತಿಂಗಳಾಯಿತು ಸರ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾವು ನೋಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: As a Government they have to enforce law.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Last ಅಧಿವೇಶನದಲ್ಲಿಯೂ ಪ್ರಸ್ತಾಪ ಮಾಡಿದ್ದೇವೆ. ಸಾಧ್ಯವಿದೆ. ಮನಸ್ಸು ಮಾಡಬೇಕಷ್ಟೇ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾವು ಸರ್ಕಾರಕ್ಕೂ ಹೇಳುತ್ತೇವೆ. ನೀವು ಬಗ್ಗಿಸಿ, ನಾವು ರೆಡಿ ಇದ್ದೇವೆ. ನಿಮಗೆ Support ಮಾಡುತ್ತೇವೆ. ಮಾಡಿ, ನೀವು action ತೆಗೆದುಕೊಳ್ಳಿ..

ಅಧ್ಯಕ್ಷರು: ಆಯಿತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾಡಲಿಕ್ಕೆ ಸಾಧ್ಯವಿದೆ.

ಅಧ್ಯಕ್ಷರು: ಏನೂ rules and regulations ಇಲ್ಲವೇ ?

ಶ್ರೀ ಜಗದೀಶ್ ಶೆಟ್ಟರ್: licence renew ಮಾಡುವುದಕ್ಕೆ ಹೋಗಬೇಡಿ. ನಿಮಗೆ ಪವರ್ ಇದೆ.

ಶ್ರೀ ಸಿದ್ದರಾಮಯ್ಯ: ಬರೆದು ಕೊಟ್ಟುಬಿಡಿ, ಅವೆಲ್ಲವನ್ನೂ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ Ministers ಅನ್ನು cabinet ನಿಂದ ತೆಗೆದುಹಾಕಿ.

ಶ್ರೀ ಸಿದ್ದರಾಮಯ್ಯ: ಜಗದೀಶ್ ಶೆಟ್ಟರ್‌ರವರೇ, ಏನೇನೂ ಮಾಡಬೇಕೆಂದು ಬರೆದುಕೊಟ್ಟುಬಿಡಿ. ಅವೆಲ್ಲವನ್ನೂ ಮಾಡುತ್ತೇವೆ.

ಅಧ್ಯಕ್ಷರು: O.K. ದಯವಿಟ್ಟು, ಸಾಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್(ಸಹಕಾರ ಸಚಿವರು): ಬಿಜಾಪುರ ಜಿಲ್ಲೆಯಲ್ಲಿ ರೈತರು ಧರಣಿ ಮಾಡುತ್ತಾ ಕಳೆದ 4–5 ದಿವಸಗಳಿಂದ ಹೊರಾಟ ಮಾಡುತ್ತಿದ್ದಾರೆ.

ಅಧ್ಯಕ್ಷರು: ಬೇಡ, ಮುಂದೆ ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: Factory ಗಳಲ್ಲಿದ್ದಾರೆ. 5 ಕಾರ್ಖಾನೆ ಮಂಡಳಿಯವರನ್ನು ಮತ್ತು ಅಲ್ಲಿಯ ರೈತರನ್ನು, ಹೋರಾಟ ಮಾಡುತ್ತಿರುವ ಮುಖಂಡರುಗಳನ್ನು, ಆ ಜಿಲ್ಲಾ ಮಂತ್ರಿಯವರನ್ನು ಕರೆದು ಒಂದು ಸಭೆಯನ್ನು ನಾನು ಗುರುವಾರ ಬೆಳಗ್ಗೆ 9 ಗಂಟೆಗೆ ಕರೆದು ಆ ಜಿಲ್ಲೆ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡುತ್ತಿದ್ದೇನೆ. ನಿನ್ನೆ ಬೆಳಗ್ಗೆ Meeting Notice ಅನ್ನು ಜಾರಿಗೊಳಿಸಿದ್ದೇವೆ. ನಿನ್ನೆ ತಾವು ಸರ್ಕಾರದಿಂದ 150 ರೂ. ಕೊಡುವ ಬಗ್ಗೆ ಹೇಳಿದ್ದೀರಿ. ಅಧ್ಯಕ್ಷರ ಮುಖಾಂತರ ಇದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು: ಬೇಡ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಉಳಿದಿರುವ 189 ಕೋಟಿ ರೂ.ಗಳನ್ನು ಕೂಡ 21ನೇ ತಾರೀಖು Finance Department release ಮಾಡಿದೆ.

ಅಧ್ಯಕ್ಷರು: Finance ನಲ್ಲಿದೆ ಎಂದು ಏಕೆ ಹೇಳಬೇಕಾಗಿತ್ತು ? Finance ಸರ್ಕಾರ, ನೀವೂ ಸರ್ಕಾರ, ಅದು ಬೇರೆ ಸರ್ಕಾರವೇ ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಬಿಜಾಪುರ ಜಿಲ್ಲೆಯ 4 Factoryಗಳೂ ಕೂಡ ಈಗಾಗಲೇ recovery certificate issue ಮಾಡಿರುವುದರಿಂದ ಅವರ ಮೇಲೆ ಕ್ರಮದ ಬಗ್ಗೆ process ಆಗಿದೆ. ಇವತ್ತಿನಿಂದಲೇ sugar ಅನ್ನು custody ಗೆ ತೆಗೆದುಕೊಳ್ಳುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ನಿನ್ನೆಯೂ ಕೂಡ ಈ ಸದನ ಮುಗಿದ ಮೇಲೆ ರೈತ ಸಂಘದ ಪ್ರತಿನಿಧಿಗಳ ಜೊತೆ ಮಾನ್ಯ ಮುಖ್ಯಮಂತ್ರಿಯವರು ಚರ್ಚೆ ಮಾಡಿ, ಅವರಿಗೂ ಕೂಡ ಎಲ್ಲವಿಚಾರವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ನಾವು ಎಲ್ಲಾ ರೀತಿಯಲ್ಲೂ FRP ಪ್ರಕಾರ, ತಾವು ಹೇಳಿದಿರಿ recovery basis ಮೇಲೆ 10.5, 11.5, 12 ಏನಿದೆ ಅದರ ಪ್ರಕಾರ ಅವರು ಪ್ರತಿಯೊಂದು per cent ಇಳುವರಿ ಜಾಸ್ತಿಯಾದರೆ, 220 ರೂ. ಹೆಚ್ಚಿಗೆ ಕೊಡಬೇಕಾಗುತ್ತದೆ. ಅದರ ಪ್ರಕಾರವೇ ಅವರಿಗೆ ಹಣ ಪಾವತಿ ಮಾಡಿಸುವುದಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: O.K. ಸಾಕು.

ಶ್ರೀ ಗೋವಿಂದ ಎಂ. ಕಾರಜೋಳ (ತಮ್ಮ ಸ್ಥಾನದಿಂದ): ಇಲ್ಲ ಸರ್, ಇನ್ನೂ ಮುಗಿದಿಲ್ಲ.

ಅಧ್ಯಕ್ಷರು: ಸಾಕು.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ, ನಾವು ಅಭಿನಂದನೆ ಸಲ್ಲಿಸುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ: Factory ಯವರು ಕಬ್ಬಿನಲ್ಲಿ, ತೂಕದಲ್ಲಿ 10% ಕಡಿಮೆ ಮಾಡಿದ್ದಾರೆ. ಅದನ್ನು ಯಾವ ರೀತಿ ಕೊಡಿಸುತ್ತೀರಿ ಹೇಳಿ ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಅದಕ್ಕೆ ನಾವು SAP ಕಾಯ್ದೆಗೆ ಕೆಲವು ತಿದ್ದುಪಡಿಯನ್ನು ಸದ್ಯದಲ್ಲಿಯೇ ತರುತ್ತಿದ್ದೇವೆ. ಅದರಲ್ಲಿ ಈ ವಿಚಾರ ಎಲ್ಲವನ್ನೂ ಸೇರಿಸಿ ಚರ್ಚೆ ಮಾಡಿ.

(ಗೊಂದಲ)

ಅಧ್ಯಕ್ಷರು: O.K.